ಪ್ರಧಾನ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಕುಂದಾಪುರ

ಒ.ಎಸ್.ನಂಬ್ರ: 68/2024
ಡಿ.ಡಬ್ಲ್ಯೂ ೀ 1

ದಿನಾಂಕಃ 11-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ೀ ವಾದಿ ಪರ ಶ್ರೀ ಎಂ ಜೆ ಎಸ್ ವಕೀಲರಿಂದ

ದಿನಾಂಕ 26-10-2023 ರಲ್ಲಿ ಬ್ರಹ್ಮಾವರದ ತಹಶೀಲ್ದಾರನಾಗಿ ಪ್ರಭಾವ ವಹಿಸಿಕೊಂಡಿರುತ್ತೇನೆ. ಈ ದಾವೆ ಬಗ್ಗೆ ನನಗೆ ಎರಡು ತಿಂಗಳಿನಿಂದ ಮಾಹಿತಿ ಇರುತ್ತದೆ. ಕಡತವನ್ನು ಓದಿ ಹಾಗೂ ನನ್ನ ಸರಕಾರಿ ವಕೀಲರನ್ನು ಭೇಟಿ ಮಾಡಿ ಪ್ರಕರಣದ ಬಗ್ಗೆ ತಿಳಿದುಕೊಂಡಿರುತ್ತೇನೆ.

2. ಈ ಪ್ರಕರಣದಲ್ಲಿ ವಾದಿ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂದು ತಿಳಿದುಕೊಂಡಿರುತ್ತೇನೆ. ಸಾಕ್ಷಿ ಪುನಃ ಇಲ್ಲ ಎಂದು ನುಡಿಯುತ್ತಾರೆ. ವಾದಿ ಜಾಗದ ಮಂಜೂರಾತಿಗಾಗಿ ವ್ಯಾಜ್ಯ ಮಾಡಿರುತ್ತಾರೆ. ಕಾರ್ಕಳ ಗ್ರಾಮದ ಸರ್ವೆ ನಂಬ್ರ 172/1 ಎ ಗೆ ಸಂಬಂದಪಟ್ಟಂತೆ ದಾವೆ ಸಲ್ಲಿಸಿರುತ್ತಾರೆ. ಸರ್ವೆ ನಂಬ್ರ 172/1 ಎ ಸರಕಾರಿ ಕಂದಾಯದ ಜಮೀನಾಗಿರುತ್ತದೆ. ನಾನು ಆ ಆಸ್ತಿಗೆ ಕಳೆದ 20 ದಿನಗಳ ಹಿಂದೆ ಭೇಟಿ ಕೊಟ್ಟಿರುತ್ತೇನೆ.

3. ವ್ಯಾಜ್ಯದ ಬಾಬ್ತಿಗೆ ಸಂಬಂದಪಟ್ಟಂತೆ ಸ್ಥಳಕ್ಕೆ ಭೇಟಿ ಕೊಟ್ಟಿರುತ್ತೇನೆ. ನಾನು ಭೇಟಿ ಕೊಟ್ಟ ಬಗ್ಗೆ ಕಛೇರಿಯ ಕಡತದಲ್ಲಿ ಯಾವುದೇ ದಾಖಲೆ ಕಂಡು ಬರುವುದಿಲ್ಲ. ಈ ಪ್ರಕರಣದ ವಾದಿಗಳಿಗೆ ಭೇಟಿ ಬಗ್ಗೆ ನಾನು ಯಾವುದೇ ನೋಟೀಸು ಕೊಟ್ಟಿರುವುದಿಲ್ಲ. ಸ್ಥಳವನ್ನು ಪಟ್ಟಣ ಪಂಚಾಯತಿಯ ಮುಖ್ಯಾಧಿಕಾರಿ ತೋರಿಸಿದ್ದು, ನಾನು 2 ನೇ ಪ್ರತಿವಾದಿಯ ಜೊತೆ ಹೋಗಿ ನೋಡಿರುತ್ತಾರೆ. ನಾನು ಸ್ಥಳಕ್ಕೆ ಹೋದಾಗ ವಾದಿಯರು ಸ್ಥಳದಲ್ಲಿ ಇರಲಿಲ್ಲ, ನಾನು ಅವರನ್ನು ಭೇಟಿಯಾಗಲು ಪ್ರಯತ್ನಿಸಿರುವುದಿಲ್ಲ.

4. ನನ್ನ ಪ್ರಕಾರ ನನ್ನ ಭೇಟಿ ಅಧಿಕೃತವಾಗಿರುತ್ತದೆ. ದಾವಾ ಬಿ ಶೆಡ್ಯೂಲ್ 70 ಸೆಂಟ್ಸ್ ಜಾಗದಲ್ಲಿ ಏನು ಕಂಡು ಬಂದಿರುತ್ತದೆ ಎಂದರೆ ಸಾಕ್ಷಿ ಕಾಡು ಮರಗಳು ಇದ್ದವು ಎಂದು ನುಡಿಯುತ್ತಾರೆ. ಸುತ್ತ ಮಣ್ಣಿನ ಧರೆ ಕಂಡು ಬಂದಿತ್ತಾ ಎಂದರೆ ಸಾಕ್ಷಿ ಓಡಾಡುವ ರಸ್ತೆ ಕಂಡು ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಕಂಡಂತಹ ರಸ್ತೆ ಕಾರ್ಕಡ ಮುಖ್ಯ ರಸ್ತೆಯಿಂದ ಆರಂಭವಾಗಿ ವಾದಿಯರ ಮನೆ ತಲುಪುತ್ತದೆ. ಅರ್ಧ ರಸ್ತೆ ಕಾಂಕ್ರಿಟ್ ರಸ್ತೆಯಾಗಿದ್ದು, ಉಳಿದ

ಅರ್ಧ ರಸ್ತೆ ಮಣ್ಣಿನ ರಸ್ತೆಯಾಗಿರುತ್ತದೆ. ನಾನು ಹೇಳಿರುವಂತೆ ಮೇಲಿನ ರಸ್ತೆ ಬಿ ಶೆಡ್ಯೂಲ್ ಸ್ವತ್ತಿನ ಯಾವ ದಿಕ್ಕಿಗೆ ಬರುತ್ತದೆ ಎಂದು ಈಗ ಹೇಳಲು ಸಾಧ್ಯವಿರುವುದಿಲ್ಲ.

5. ಕಂದಾಯ ದಾಖಲೆಗಳಲ್ಲಾಗಲಿ ಅಥವಾ ಆರ್ ಟಿ ಸಿ ಗಳಲ್ಲಾಗಲಿ ರಸ್ತೆ ಇರುವ ಬಗ್ಗೆ ನಮೂದು ಇರುವುದಿಲ್ಲ, ಆದರೆ ಪಂಚಾಯತಿಯಿಂದ ರಸ್ತೆ ನಿರ್ಮಿಸಿರುವುದು ಕಂಡು ಬಂದಿರುತ್ತದೆ ಎಂದು ನುಡಿಯುತ್ತಾರೆ. ನಾನು ಈ ಬಗ್ಗೆ ದಾಖಲೆ ಪರಿಶೀಲಿಸಿರುವುದಿಲ್ಲ, ಅಲ್ಲಿ ಹಾಜರಿದ್ದ ಮುಖ್ಯ ಅಧಿಕಾರಿಗಳು ರಸ್ತೆ ನಿರ್ಮಿಸಿದ್ದಾಗಿ ತನಗೆ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತಹ ರಸ್ತೆ ಸರ್ವೆ ನಂಬ್ರ 172/1 ಎ ರಲ್ಲಿ ಇರುತ್ತದೆ. ನಾನು ಆ ರಸ್ತೆಯನ್ನು ಅಳತೆ ಮಾಡಿರುವುದಿಲ್ಲ, ದಿಶಾಂಕದ ಮೂಲಕ ನನಗೆ ಗೊತ್ತಾಗಿರುತ್ತದೆ.

6. ದಾವಾ ಎ ಶೆಡ್ಯೂಲ್ ಅಥವಾ ಬಿ ಶೆಡ್ಯೂಲ್ ನಲ್ಲಿ ರಸ್ತೆ ಅಸ್ತಿತ್ವದಲ್ಲಿ ಇರುವ ಬಗ್ಗೆ ದಾಖಲೆಗಳಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿ. ವಾದಿಯರು ಈ ಪ್ರಕರಣದಲ್ಲಿ ಏನು ಸಾಧಿಸುತ್ತಿರುತ್ತಾರೆ ಎಂದು ಗೊತ್ತಿರುತ್ತದೆ. ಸರಕಾರದ ವತಿಯಿಂದ ಪ್ರತಿವಾದಿ 1 ರಿಂದ 3 ರವರು ಲಿಖಿತ ತಕರಾರನ್ನು ಸಲ್ಲಿಸಿದ್ದು, ಆ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಆ ಲಿಖಿತ ತಕರಾರಿಗೆ ಮಾಹಿತಿಯನ್ನು ಕೊಟ್ಟವರು ನನಗೆ ಗೊತ್ತಿರುತ್ತದೆ.

ಈ ಸಂದರ್ಭದಲ್ಲಿ ಮುಂದುವರಿದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ